ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86.

# ದಿನಾಂಕ:-05-02-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ:ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್/37/2021-22 ದಿನಾಂಕ:03-02-2022

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀಮತಿ. ಗೀತಾ ಕೇನಾಲ್ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀಮತಿ. ಮಂಜುಳಾ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀ.ಉದಯ ಶಂಕರ್ | 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. |
| 6. | ಶ್ರೀ.ರಾಮಚಂದ್ರ | 1ನೇ 'ಎನ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. |
| 7. | ಶ್ರೀ. ಸತೀಶ್ ರಾಮದಾಸ್ | ವಾರ್ಡ್ ನಾಗರೀಕರು. |
| 8. | ಶ್ರೀ. ರಾಮಾನಾಥ್ | ವಾರ್ಡ್ ನಾಗರೀಕರು. |
| 9. | ಶ್ರೀ. ಆರ್ ರಂಗರಾಜು | ವಾರ್ಡ್ ನಾಗರೀಕರು. |
| 10. | ಶ್ರೀ. ಗಂಗಾಧರ್‌ಚಾರಿ | ವಾರ್ಡ್ ಮಾರ್ಷಲ್. ವಾರ್ಡ್ ಸಂಖ್ಯೆ-67 |
| 11. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್ ಸಂಖ್ಯೆ-67 |
| 12. | ಶ್ರೀ. ರಾಹುಲ್ ದೇವ್, | ಜಲ ಪರೀವಿಕ್ಷಕರು, ಬೆಂ.ಜ.ಮಂ. ಎನ್.ಡಬ್ಲೂ-1 |
| 13. | ಶ್ರೀ.ಆನಂದ್ ಮೂರ್ತಿ | ಸಹಾಯಕ ಅಭಿಯಂತರರು. ಬೆಸ್ಕಂ ಎನ್1ಉಪವಿಭಾಗ |
| 14. | ಶ್ರೀ. ಎಚ್ ರಮೇಶ್ | ಕಿರಿಯ ಅಭಿಯಂತರರು, ಬೆಸ್ಕಂ ಎನ್7ಉಪವಿಭಾಗ |
| 15. | ಶ್ರೀ. ಮಲ್ಲಯ್ಯ | ಅರಣ್ಯ ಇಲಾಖೆ ಸಿಬ್ಬಂಧಿ, ಮೇಸ್ತ್ರಿ. |
| 16. | ಶ್ರೀ.ಮಂಜುನಾಥ್ | ತೋಟಗಾರಿಕೆ ಇಲಾಖೆ ಮೇಸ್ತ್ರಿ, ಪಶ್ಚಿಮ ವಲಯ. |



ಪು.ತಿ.ನೋ.

| | | |
|---|---|---|
| 17. | ಶ್ರೀ.ಕೆ.ವಿ ಲೋಕೇಶ್ | ಪಶು ಕೆಲಸ ವಿಭಾಗ |
| 18. | ಶ್ರೀ. ಸುರೇಶ್ ಬಾಬು | ಪೋಲಿಸ್ ಎ.ಎಸ್.ಐ ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆ |
| 19. | ಶ್ರೀ.ಗುರುಮೂರ್ತಿ | ಘ.ತ್ಯಾ.ನಿ ವಿಭಾಗದ ಸೂಪರ್‌ವೈಸರ್ |
| 20. | ಸುಬ್ರಮಣ್ಯನಗರ ಪೊಲೀಸ್ ಠಾಣೆ | ಗೈರು ಹಾಜರಿ |
| 21. | ರಾಜಾಜಿನಗರ ಪೊಲೀಸ್ ಠಾಣೆ (ಸಂಚಾರಿ) | ಗೈರು ಹಾಜರಿ |
| 22. | ಮಲ್ಲೇಶ್ವರಂ ಪೊಲೀಸ್ ಠಾಣೆ (ಸಂಚಾರಿ) | ಗೈರು ಹಾಜರಿ |
| 23. | ಸಹಾಯಕ ಅಭಿಯಂತರರು ಬೆಂ.ಜ.ಮಂ ಎಸ್.ಡಬ್ಲ್ಯೂ- 1 ಹಾಗು 2 | ಗೈರು ಹಾಜರಿ |
| 24. | ಸಹಾಯಕ ಅಭಿಯಂತರರು, ಬೋರ್‌ವೆಲ್ | ಗೈರು ಹಾಜರಿ |
| 25. | ಬೀದಿ ದೀಪ ನಿರ್ವಹಣೆ | ಗೈರು ಹಾಜರಿ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಫೆಬ್ರವರಿ ಮಾಹೆಯ ದಿ:05/02/2022 ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅಹವಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಹಿರಿಯ ಆರೋಗ್ಯ ಪರೀವಿಕ್ಷಕರನ್ನು ಉದೇಶಿಸಿ ಕೋವಿಡ್ ಪ್ರಕರಣಗಳನ್ನು ನಿಗ ವಹಿಸಿ ತುರ್ತು ಕ್ರಮ ಕೈಗೊಳಲು ಮತ್ತು ಸೂಕ್ತ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳಲು ತಿಳಿಸಿದರು ಮತ್ತು ಕೋವಿಡ್ ಪ್ರಗತಿ ಪರಿಶೀಲನೆ ಮಾಡಿದರು. ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-67 ನಾಗಪುರ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳ ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್ ಸಂಖ್ಯೆ-67 | ವಾರ್ಡ್‌ನಲ್ಲಿ 8 ಕೋವಿಡ್ ಪ್ರಕರಣಗಳು ದಾಕಲಾಗಿದ್ದು ಅವರನ್ನು ಹೋಮ್ ಕ್ವಾರೆಂಟೈನ್ ಮಾಡಲಾಗಿರುತ್ತದೆ, ಹಾಗು ಆರೋಗ್ಯ ಇಲಾಖೆ ಇಂದ ಅಕ್ಕ ಪಕ್ಕ ಮನೆಗಳಿಗೆ ಕೋವಿಡ್ ಟೆಸ್ಟಿಂಗ್ ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ಮಾಹಿತಿ ಒದಗಿಸಿದರು. |
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 'ಆರ್' ಬ್ಲಾಕ್‌ನಲ್ಲಿ ಮರವು ಪೂರ್ತಿಯಾಗಿ ಒಣಗಿದ್ದು ಸದರಿ ಮರವು ರಸ್ತೆಗೆ ಬಿಳುವ ಸಂಭವವಿರುತ್ತದೆ ಆದ್ದರಿಂದ ಒಣಗಿರುವ ಮರವನ್ನು ತುರ್ತಾಗಿ ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ರಾಮಚಂದ್ರ<br>1ನೇ 'ಎನ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 'ಎನ್' ಬ್ಲಾಕ್‌ನಲ್ಲಿ ಹಲವು ಮರಗಳ ಟ್ರೀಂಮಿಂಗ್ ಮಾಡಬೇಕು ಹಾಗು ಕಳೆದ ಸಭೆಯ ದೂರಿನಂತೆ ಗಣೇಶ ದೇವಾಲಯದ ಹಿಂಭಾಗದ ರಸ್ತೆಗೆ ಅಡ್ಡಲಾಗಿ ಬೆಳೆದಿರುವ ಮರವನ್ನು ತೆರವುಗೊಳಿಸಲು ಕೋರಿದ್ದು ಸದರಿ ಮರವನ್ನು ತೆಹಲ್‌ವರೆವಿಗು ಅರಣ್ಯ ಇಲಾಖೆಯವರು ತೆರವುಗೊಳಿಸಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |

ಪು.ತಿ.ನೋ.



ಅಕ್ಷತಾ.ಆ

Scanned by CamScanner

| | |
|---|---|
| ಶ್ರೀಮತಿ. ಗೀತಾ ಕೇನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರ 19ನೇ ಸಿ ಮೈನ್‌ನಲ್ಲಿ ಮರಗಳ ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಮಲ್ಲಯ್ಯ ಅರಣ್ಯ ಇಲಾಖೆ ಸಿಬ್ಬಂಧಿ, ಮೇಸ್ತ್ರಿ | ವಾರ್ಡ್‌ನ ಸಮಿತಿ ಸಭೆಯ ಸದಸ್ಯರ ದೂರಿನಂತೆ ರಾಜಾಜಿನಗರ 'ಆರ್' ಬ್ಲಾಕ್‌ನಲ್ಲಿ ಒಣಗಿರುವ ಮರವನ್ನು ತೆರವುಗೊಳಿಸಲಾಗುವುದು, ರಾಜಾಜಿನಗರ 'ಎನ್' ಬ್ಲಾಕ್, 19ನೇ ಸಿ ಮೈನ್‌ನಲ್ಲಿ ಮರಗಳ ಟ್ರೀಮಿಂಗ್ ಮಾಡಲಾಗುವುದು ಹಾಗು ಗಣೇಶ ದೇವಾಲಯದ ಹಿಂಭಾಗದ ರಸ್ತೆಗೆ ಅಡ್ಡಲಾಗಿ ಬೆಳೆದಿರುವ ಮರವನ್ನು ತೆರವುಗೊಳಿಸಲು ಈ ವರೆವಿಗು ಅರಣ್ಯ ಇಲಾಖೆಯಿಂದ ಅನುಮತಿ ಸಿಕ್ಕಿರುವುದಿಲ್ಲ, ಸದರಿ ಮರವನ್ನು ತೆರವುಗೊಳಿಸಲು ಅನುಮತಿ ಪಡೆದ ಕೂಡಲೇ ಮರವನ್ನು ತೆರವುಗೊಳಿಸಲಾಗುವುದಾಗಿ ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಅರಣ್ಯ ಇಲಾಖೆಗೆ ಸಂಭಂದಿಸಿದ ಪಶ್ಚಿಮ ವಿಭಾಗದ ಆರ್.ಎಫ್.ಓ ರವರು ಸದರಿ ದೂರುಗಳ ಅನ್ವಯ ಕ್ರಮವಹಿಸಲು ಸೂಚಿಸಿದರು. |
| ಶ್ರೀಮತಿ. ಮಂಜುಳಾ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರದ ಕೇತ್‌ಮಾರನಹಳ್ಳಿಯಲ್ಲಿ ಜಿಯೋ (ಖಾಸಗಿ ಕಂಪನಿಯವರು) ಮನೆ ಮುಂಭಾಗದ ಚರಂಡಿಯ ಚಪ್ಪಡಿ ಕಲ್ಲುಗಳನ್ನು ಹಾನಿ ಮಾಡಿದ್ದಾರೆ ಹಾಗು ರಸ್ತೆಯನ್ನು ಸಹ ಅಗೆದು ಮುಚ್ಚದೆ ಹಾಗೆ ಬಿಟ್ಟಿರುತ್ತಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸಭೆಯ ಸದಸ್ಯರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನ ಸಹಾಯಕ ಅಭಿಯಂತರರು ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ್-67 | ವಾರ್ಡ್‌ನ ಸಮಿತಿ ಸಭೆಯ ಸದಸ್ಯರ ದೂರಿಗೆ ಸಂಭಂದಿಸಿದಂತೆ ಜಿಯೋ (ಖಾಸಗಿ ಕಂಪನಿಯವರು) 1ನೇ ಎನ್ ಬ್ಲಾಕ್ ಹಾಗು ವಾರ್ಡ್‌ನ ಹಲವಾರು ಕಡೆ ರಸ್ತೆಯನ್ನು ಅಗೆಯುವುದು ಕಂಡುಬಂದು ಸದರಿ ಖಾಸಗಿ ಕಂಪನಿಯವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇವೆ ಹಾಗು ಸದರಿ ಗುತ್ತಿಗೆದಾರರಿಗೆ ದೂರವಾಣಿ ಮೂಖೇನ ಕರೆ ಮಾಡಿ ಸದರಿ ರಸ್ತೆ ಹಾಗು ಚಪ್ಪಡಿಗಳನ್ನು 3 ದಿನಗಳೊಳಗೆ ಸರಿಪಡಿಸಲು ಸೂಚಿಸಿದರು. |
| ಶ್ರೀ.ರಾಮಚಂದ್ರ 1ನೇ 'ಎನ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನ ಗಣೇಶ ದೇವಾಲಯದ ಹಿಂಭಾಗದ ಉದ್ಯಾನದಲ್ಲಿ ಸಾರ್ವಜನಿಕರು ಹಾಗು ದಿನನಿತ್ಯ ವಾಕಿಂಗ್ ಮಾಡುವವರು ಕುಳಿತುಕೊಳ್ಳಲು ಬೆಂಚಸ್(ಕುರ್ಚಿ) ಗಳನ್ನು ಹಾಕಲು ಈ ಹಿಂದೆ ಕಳೆದ ಸಭೆಗಳಲ್ಲಿ ಪ್ರಸ್ತಾಪಿಸಿದ್ದು ಈವರೆವಿಗು ಬೆಂಚಸ್(ಕುರ್ಚಿ) ಗಳನ್ನು ಹಾಕಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ್-67 | ವಾರ್ಡ್‌ನ ಸಮಿತಿ ಸಭೆಯ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕಳೆದ ಸಭೆಗಳಲ್ಲಿ ಪ್ರಸ್ತಾಪಿಸಿರುವಂತೆ ಉದ್ಯಾನಕ್ಕೆ ಬೆಂಚಸ್(ಕುರ್ಚಿ) ಗಳನ್ನು ಹಾಕಲು ಅಂದಾಜು ಪಟ್ಟಿಯನ್ನು ಮಾರ್ಪಾಡು ಮಾಡಲು ಅನುಮೋದನೆ ಪಡೆಯಲು ಕಡತವನ್ನು ಕಳುಹಿಸಲಾಗಿತ್ತು ಸದರಿ ಕಡತವು ಅನುಮೋದನೆ ಪಡೆದಿದ್ದು ಗುತ್ತಿಗೆದಾರರಿಗೆ ಈಗಾಗಲೇ ಕಾಮಗರಿಯನ್ನು ಪ್ರಾರಂಭಿಸಲು ಸೂಚಿಸಲಾಗಿದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ್-67 | ವಾರ್ಡ್‌ನ ಉಷಾ ಉದ್ಯಾನದಲ್ಲಿ ಗಿಡಗಳಿಗೆ ಸರಿಯಾಗಿ ನೀರು ಬಿಟ್ಟಿರುವುದಿಲ್ಲ ತೋಟಗಾರಿಕೆ ಇಲಾಖೆಯವರು ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು. |
| ಶ್ರೀ.ಮಂಜುನಾಥ್ ತೋಟಗಾರಿಕೆ ಇಲಾಖೆ ಮೇಸ್ತ್ರಿ, ಪಶ್ಚಿಮ ವಲಯ. | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ಉದ್ಯಾನದಲ್ಲಿ ಗಿಡಗಳಿಗೆ ಸರಿಯಾದ ಸಮಯಕ್ಕೆ ನೀರು ಬಿಡಲು ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |

ಮು.ತಿ.ನೋ.



Scanned by CamScanner

| | |
|---|---|
| ಶ್ರೀ. ಆರ್ ರಂಗರಾಜು<br>ವಾರ್ಡ್ ನಾಗರೀಕರು | ವಾರ್ಡ್‌ನ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನಲ್ಲಿ ಹಲವು ಕಡೆ ಸೊಳ್ಳೆ ಕಾಟ ಜಾಸ್ತಿಯಾಗಿದ್ದು ನಿಂತಿರುವ ನೀರು ಹಾಗು ಚರಂಡಿಗಳ ಹತ್ತಿರ ಕೆಮಿಕಲ್ ಸ್ಪ್ರೇ ಮಾಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್ ಸಂಖ್ಯೆ-67 | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ದೂರಿನ ವಿಳಾಸ ಪಡೆದು ಕೂಡಲೇ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್ ನಾಗರೀಕರು | ವಾರ್ಡ್‌ನ ನಾಗಪುರ 1ನೇ ಮೈನ್, 10ನೇ 'ಡಿ' ಅಡ್ಡ ರಸ್ತೆ ಹಾಗು ಜಿಡಿ ನಾಯ್ಡು ಹಾಲ್ ರಸ್ತೆಯಲ್ಲಿ ಗುಂಡಿಗಳಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಕಾಮಗಾರಿ ವಿಭಾಗದ ಸಹಾಯಕ ಅಭಿಯಂತರರು ಗುಂಡಿಗಳನ್ನು ಮುಚ್ಚಲು ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್ ನಾಗರೀಕರು. | ವಾರ್ಡ್‌ನಲ್ಲಿ ಹಲವು ಬೇಕರಿ ಹಾಗು ಚಿಕ್ಕ ಚಿಕ್ಕ ಟೀ ಅಂಗಡಿಗೆ ಬರುವ ಗ್ರಾಹಕರು ಟೀ ಹಾಗು ಕಾಫಿ ಕುಡಿದ ಲೋಟಗಳನ್ನು ರಸ್ತೆ ಹಾಗು ಫುಟ್ ಪಾತ್ ಮೇಲೆ ಬಿಸಾಡಿ ಹೋಗಿರುತ್ತಾರೆ ಆದರು ಅಂಗಡಿ ಮಾಲೀಕರು ಯಾವುದೇ ಸ್ವಚ್ಛತೆ ಮಾಡುವ ಕ್ರಮ ಕೈಗೊಂಡಿರುವುದಿಲ್ಲ ಇದರಿಂದ ಲೋಟಗಳೆಲ್ಲ ರಸ್ತೆಯಲ್ಲಿ ಚಲ್ಲಪಿಲ್ಲಿಯಾಗಿ ಬಿದ್ದಿರುತ್ತದೆ, ಇದನ್ನು ಗಮನಿಸಿ ಹಿರಿಯ ಆರೋಗ್ಯ ಪರೀವಿಕ್ಷಕರು, ಅಂಗಡಿ ಮಾಲೀಕರಿಗೆ ಎಚ್ಚರಿಕೆ ನೋಟಿಸ್ ನೀಡುವುದು ಹಾಗು ಅಂಗಡಿ ಮಾಲೀಕರಿಗೆ ಅಂಗಡಿ ಮುಂಗಟ್ಟಿನಲ್ಲಿ ಸ್ವಚ್ಛತೆ ಕಾಪಾಡುವ ಕ್ರಮ ತೆಗೆದುಕೊಳ್ಳಲು ಹಿರಿಯ ಆರೋಗ್ಯ ಪರೀವಿಕ್ಷಕರು ಅಂಗಡಿ ಮಾಲೀಕರಿಗೆ ತಿಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್ ಸಂಖ್ಯೆ-67 | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್ ನಾಗರೀಕರು. | ವಾರ್ಡ್‌ನ ಪ್ರಗತಿ ನರಸಿಂಗ್ ಹೋಮ್ ಹತ್ತಿರ 2-3 ಅಭಾಂಡೆಡ್ ವಾಹನಗಳಿದ್ದು ಆ ವಾಹನಗಳ ಹಿಂದೆ ಜನಗಳು ಕಸ ತಂದು ಹಾಕುತ್ತಿದ್ದಾರೆ, ಡೆಬ್ರೀಸ್ ಹಾಕುತ್ತಿದ್ದಾರೆ ಹಾಗು ಮುತ್ರ ವಿಸರ್ಜನೆ ಮಾಡಿ ಪಾದಚಾರಿ ಮಾರ್ಗವನ್ನು ಹಾಳು ಮಾಡುತ್ತಿದ್ದಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಆರ್ ರಂಗರಾಜು<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ 1ನೇ ಎನ್ ಬ್ಲಾಕ್‌ನ ಎನ್.ಪಿ.ಎಸ್ ಶಾಲೆ ಹತ್ತಿರ ಹರೆ ಕೃಷ್ಣಾ ಉದ್ಯಾನದ ಗೋಡೆಗೆ ಮುತ್ರ ವಿಸರ್ಜನೆ ಮಾಡುತ್ತಾರೆ ಇದರಿಂದ ರಸ್ತೆಯಲ್ಲಿ ಓಡಾಡುವವರಿಗೆ ಹಾಗು ಅಕ್ಕ ಪಕ್ಕದ ಮನೆಯವರಿಗೆ ಬಹಳ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಮಾರ್ಷಲ್ ಗಸ್ತು ತಿರುಗಿ ಕಸ, ಡೆಬ್ರೀಸ್ ಹಾಗು ಮುತ್ರ ವಿಸರ್ಜನೆ ಮಾಡುವವರಿಗೆ ದಂಡ ಹಾಕಿ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದರು ಹಾಗು ಅಭಾಂಡೆಡ್ ವಾಹನಗಳನ್ನು ಪೊಲೀಸ್ ಇಲಾಖೆಯವರು ಸ್ಥಳ ಪರೀಶಿಲಿಸಿ ಸದರಿ ವಾಹನಗಳನ್ನು ತೆರವುಗೋಳಿಸಲು ಕ್ರಮ ವಹಿಸಲು ಸೂಚಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್ ನಾಗರೀಕರು. | ವಾರ್ಡ್‌ನ ಉದ್ಯಾನಗಳಲ್ಲಿ ಪ್ಲಾಸ್ಟಿಕ್ ಕವರ್‌ಗಳು ಹಾಗು ಪೇಪರ್‌ಗಳ ತುಂಡುಗಳು ಎಲ್ಲೆಂದರಲ್ಲಿ ಬಿದ್ದಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಮಂಜುನಾಥ್<br>ತೋಟಗಾರಿಕೆ ಇಲಾಖೆ ಮೇಸ್ತ್ರಿ,<br>ಪಶ್ಚಿಮ ವಲಯ. | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಉದ್ಯಾನಗಳ ಸ್ವಚ್ಛತೆ ಕಾಪಾಡುವುದರ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿದರು. |



ಪು.ತಿ.ನೋ.

Scanned by CamScanner

| | |
|---|---|
| ಶ್ರೀ. ಆರ್ ರಂಗರಾಜು<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ 1ನೇ ಎನ್ ಬ್ಲಾಕ್‌ನ ಸುಬ್ರಮಣ್ಯ ದೇವಾಲಯದ ಹತ್ತಿರ ರಸ್ತೆಯಲ್ಲಿ ಅಬಾಂಡೆಡ್ ವಾಹನವು ನಿಂತಿರುತ್ತದೆ ಇದರಿಂದ ಸಾರ್ವಜನಿಕರಿಗೆ ತೀರ ಅನಾನುಕೂಲವಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ 1ನೇ ಎನ್ ಬ್ಲಾಕ್‌ನ ಸುಬ್ರಮಣ್ಯ ದೇವಾಲಯದ ಹತ್ತಿರ ರಸ್ತೆಯಲ್ಲಿ ಅಬಾಂಡೆಡ್ ವಾಹನವನ್ನು ಸುಬ್ರಮಣ್ಯನಗರ ಪೊಲೀಸ್ ಠಾಣೆಯವರು ಸ್ಥಳ ಪರಿಶೀಲಿಸಿ ಸದರಿ ವಾಹನಗಳನ್ನು ತೆರವುಗೊಳಿಸಲು ಕ್ರಮ ವಹಿಸಲು ಸೂಚಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ 1ನೇ ಎನ್ ಬ್ಲಾಕ್‌ನಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಮಾಡಿ ಅಂಗಡಿಯವರು ರಸ್ತೆಗೆ ಅಲಂಕಾರಿಕ ವಸ್ತುಗಳನ್ನು ವ್ಯಾಪಾರಕ್ಕೆ ಇಟ್ಟಿರುತ್ತಾರೆ ಇದರಿಂದ ಪಾದಚಾರಿ ಮಾರ್ಗದಲ್ಲಿ ಓಡಾಡುವವರಿಗೆ ಬಹಳ ತೊಂದರೆ ಉಂಟಾಗುತ್ತಿರುತ್ತದೆ ವಾರ್ಡ್‌ನ ಸಹಾಯಕ ಅಭಿಯಂತರರು ಕ್ರಮವಹಿಸಲು ಸೂಚಿಸಿದರು ಹಾಗು ಅಂಗಡಿ ಮಾಲೀಕರಿಗೆ ಫೈನ್ ಹಾಕಲು ಸೂಚಿಸಿದರು. |
| ಶ್ರೀ.ರಾಮಚಂದ್ರ<br>1ನೇ 'ಎನ್' ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 1ನೇ ಎನ್ ಬ್ಲಾಕ್‌ನಲ್ಲಿ 2 ರಿಂದ 3 ಕಲ್ವರ್ಟ್‌ಗಳ ರ‍್ಯಾಂಪ್ ಹಾಳಾಗಿರುತ್ತದೆ ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್-67 | ವಾರ್ಡ್‌ನಲ್ಲಿ ಕಲ್ವರ್ಟ್‌ಗಳ ದುರಸ್ಥಿ ಹಾಗು ಚರಂಡಿ ಕಾಮಗಾರಿ ಕೈಗೊಳ್ಳಲು ಅಂದಾಜು ಪಟ್ಟಿ ಮಾಡಲಾಗಿದೆ, ಹಾಳಾಗಿರುವ ಕಲ್ವರ್ಟ್ ರ‍್ಯಾಂಪ್‌ಗಳ ದುರಸ್ಥಿಯನ್ನು ಸರಿಪಡಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಆರ್ ರಂಗರಾಜು<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ 1ನೇ ಎನ್ ಬ್ಲಾಕ್‌ನಲ್ಲಿ ಬೀದಿ ನಾಯಿಗಳ ಕಾಟ ಜಾಸ್ತಿಯಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಕೆ.ವಿ ಲೋಕೇಶ್<br>ಪಶು ಕೆಲಸ ವಿಭಾಗ | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಸ್ಥಳ ಪರಿಶೀಲಿಸಿ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್ ನಾಗರೀಕರು. | ವಾರ್ಡ್‌ನ ನಾಗಪುರ ಅಂಬೇಡ್ಕರ್ ಕಾಲೇಜ್ ಆಟದ ಮೈದಾನಕ್ಕೆ ಗೇಟ್ ಇರುವುದಿಲ್ಲ ಇದರಿಂದ ರಾತ್ರಿ ವೇಳೆ ಮೈದಾನದಲ್ಲಿ ಕುಡಿಯುವುದು ಹಾಗು ಇತರೆ ಚಟುವಟಿಕೆಗಳು ನಡೆಯುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್-67 | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಅಂಬೇಡ್ಕರ್ ಕಾಲೇಜ್ ಆಟದ ಮೈದಾನಕ್ಕೆ ಗೇಟ್ ಅಳವಡಿಸಲು ನೂತನ ಅಂದಾಜು ಪಟ್ಟಿಯಲ್ಲಿ ಸೇರಿಸಿ ಕ್ರಮವಹಿಸಲಾಗುವುದಾಗಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕಪ್ಪು ಚುಕ್ಕಿ ಪ್ರದೇಶಗಳನ್ನು ಕಣ್ಗಾವಲು ಮಾಡಿ ಕಸ ಹಾಕುವವರಿಗೆ ದಂಡ ವಿಧಿಸಲು ಹಾಗು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿರ್ದೇಶಿಸಲಾಯಿತು ಮುಂದುವರಿಯುತ ಒಣ ತ್ಯಾಜ್ಯ ಸಂಗ್ರಹಕಾರರು ಮನೆ ಮನೆಯಿಂದ ಸಂಗ್ರಹಿಸುವ ಒಣ ತ್ಯಾಜ್ಯವನ್ನು ಅವರ ಪತಿಯಿಂದಲೇ ಸಂಸ್ಕರಿಸಿ ನಿರ್ವಹಿಸಲು ಸೂಚಿಸುವುದು ಒಂದು ವೇಳೆ ಅನುಪಯುಕ್ತ ಒಣ ತ್ಯಾಜ್ಯವನ್ನು ರಸ್ತೆಗೆ ಬಿಸಾಡಿದಲ್ಲಿ ಅವರಿಗೆ ದಂಡ ವಿಧಿಸಲು ಸೂಚಿಸಲಾಯಿತು. ಹಾಗು ಹಿರಿಯ ಆರೋಗ್ಯ ಪರೀವಿಕ್ಷಕರು ಹಾಗು ಮಾರ್ಷಲ್ ಇಬ್ಬರ ಸಮುಖದಲ್ಲಿ ನಿಷೇದಿತ ಏಕ ಬಳಕೆ ಪ್ಲಾಸ್ಟಿಕ್ ಬಳಕೆದಾರರ ಅಂಗಡಿಗಳನ್ನು ರೈಡ್ ಮಾಡಿ ದಂಡ ಹಾಕಲು ಸೂಚಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕಿರಿಯ ಆರೋಗ್ಯ ಪರೀವಿಕ್ಷಕರ ಹುದ್ದೆಯು ಖಾಲಿ ಇದ್ದು ಈಗಿರುವ ಕಿರಿಯ ಆರೋಗ್ಯ ಪರೀವಿಕ್ಷಕರು ವಾಡ್-44ರಿಂದ ಪ್ರಭಾರರಾಗಿರುತ್ತಾರೆ ತುರ್ತಗಿ ಖಾಲಿ ಇರುವ ಹುದ್ದೆಯನ್ನು ತುಂಬಲು ಡಿ.ಸಿ.ಎ ಗೆ ವರದಿಸಲು ವಾರ್ಡ್ ಸಮಿತಿ ಮೂಲಕ ತಿಳಿಸಿದರು. |



ಕಾ.ಕಿ.ನೋ.

ಅಶ್ವಿನಿ.ಎ

Scanned by CamScanner

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್–67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

**ಪ್ರತಿಯನ್ನು**

1. ಮಾನ್ಯ ವಲಯ ಉಪಆಯುಕ್ತರು (ಆಡಳಿತ), ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

07/02/22

**ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು, ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿಗಳು ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**



Scanned by CamScanner